ನಿಮ್ಮೊಡನೆ

# ಎಂಜಿನಿಯರಿಂಗ್ ಶಿಕ್ಷಣದ ಒತ್ತಡ

ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಯೊಬ್ಬ ಶೈಕ್ಷಣಿಕ ಒತ್ತಡ ಎದುರಿಸಲಾಗದೆ ನೇಣಿಗೆ ಕೊರಳೊಡ್ಡಿದ ದುರ್ಘಟನೆ ವಿಷಾದಕರ. ತಾಂತ್ರಿಕ ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟಕ್ಕೆ ಸಂಬಂಧಿಸಿದ ನಿಯಮಗಳು ಸ್ವಾಯತ್ತ ಕಾಲೇಜುಗಳ ವಿಷಯದಲ್ಲಿ ಕಠಿಣವಾಗಿರುವುದು ವಿದ್ಯಾರ್ಥಿಗಳ ಮೇಲಿನ ಒತ್ತಡವನ್ನು ಹೆಚ್ಚಿಸಿದೆ ಎಂಬಂತಹ ಕಾರಣಗಳನ್ನು ಇಂಥ ದುರ್ಘಟನೆಗಳ ಸಂದರ್ಭದಲ್ಲಿ ಹೇಳಲಾಗುತ್ತದೆ.



ಎರಡು ದಶಕಗಳಿಂದ ದೇಶದಲ್ಲಿ ಜಾರಿಗೆ ಬಂದಿರುವ ಜಾಗತೀಕರಣ ನಮ್ಮ ಶಿಕ್ಷಣ ಕ್ಷೇತ್ರದ ಮೇಲೆ ಬೀರಿರುವ ಪರಿಣಾಮ ಹೆಚ್ಚು ಸಂಕೀರ್ಣವಾದದ್ದು. ಹೊರಗುತ್ತಿಗೆಯ ಪರಿಕಲ್ಪನೆ ಸೃಷ್ಟಿಸಿದ ಉದ್ಯೋಗಾವಕಾಶಗಳು ಯುವ ಜನತೆಯ ಕಲಿಕೆಯ ಆದ್ಯತೆಗಳನ್ನೇ ಬದಲಿಸಿವೆ. ಯಾವುದೇ ವಿಷಯದ ಪದವಿಯಾದರೂ ಸಂವಹನ ಸಾಮರ್ಥ್ಯ ಇದ್ದರೆ ಉದ್ಯೋಗ ಮಾರುಕಟ್ಟೆಯಲ್ಲಿ ಅವಕಾಶವಿದೆ ಎಂಬ ಪರಿಸ್ಥಿತಿಯನ್ನು ಸೃಷ್ಟಿಸಿದ್ದು ಈ ಬದಲಾವಣೆ. ಕಲೆ, ವಿಜ್ಞಾನ, ವಾಣಿಜ್ಯ ವಿಷಯಗಳಲ್ಲಿ ಪಡೆದ ಪದವಿ ಮೂಲ ಅರ್ಹತೆಯಾಗಿದ್ದರೂ ಇಂಗ್ಲಿಷಿನಲ್ಲಿ ಸಂವಹನ ಕ್ಷಮತೆ ಬೇಡಿಕೆಯ ಉದ್ಯೋಗಗಳನ್ನು ಸೃಷ್ಟಿಸಿದ್ದರಿಂದ ಪದವಿ ಶಿಕ್ಷಣ ತತ್ಕಾಲದ ಮಾರುಕಟ್ಟೆಯ ಬೇಡಿಕೆಯನ್ನು ಪೂರೈಸುವುದರತ್ತ ಆದ್ಯತೆ ನೀಡಬೇಕಾಯಿತು. ಮೂಲ ವಿಷಯದ ಅಧ್ಯಯನಕ್ಕಿಂತ ಅನ್ವಯಿಕ ಅಂಶಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಅನಿವಾರ್ಯವಾಯಿತು.

ಇದರ ಪರಿಣಾಮ ಎಂಜಿನಿಯರಿಂಗ್ ಶಿಕ್ಷಣಕ್ಕೆ ಹೆಚ್ಚಾದ ಬೇಡಿಕೆ ಮತ್ತು ಅದರ ಅಧ್ಯಯನವನ್ನು ಹೆಚ್ಚು ಹೆಚ್ಚು ಉದ್ಯಮಸ್ನೇಹಿಯನ್ನಾಗಿ ಮಾಡಬೇಕಾದ ಒತ್ತಡ. ಹೊರಗುತ್ತಿಗೆ ಕಂಪೆನಿಗಳಿಗೆ ಹೊತ್ತುಗೊತ್ತಿಲ್ಲದೆ ದುಡಿಯಬಲ್ಲ ಯುವ ಶಕ್ತಿಯನ್ನು ತರುಣ ವಯಸ್ಸಿನಲ್ಲಿಯೇ ಸೆಳೆಯುವ ಧಾವಂತ. ಒಳ್ಳೆಯ ಕಾಲೇಜುಗಳಲ್ಲಿ ಶಿಕ್ಷಣ ನಡೆದಿರುವಾಗಲೇ ಉದ್ಯೋಗಕ್ಕೆ ಆಯ್ಕೆ ಮಾಡಿಕೊಳ್ಳುವ ಅವಕಾಶ ಇನ್ನಷ್ಟು ಆಕರ್ಷಣೆಯನ್ನು ಸೃಷ್ಟಿಸಿದ್ದು ಇದರಿಂದಾದ ಇನ್ನೊಂದು ಬಗೆಯ ಬೆಳವಣಿಗೆ. ಎಂಜಿನಿಯರಿಂಗ್ ಶಿಕ್ಷಣಕ್ಕೆ ಉದ್ಯಮ ಕ್ಷೇತ್ರ ನಿರೀಕ್ಷಿಸುವ ಅಂಶಗಳನ್ನು ತಾತ್ವಿಕ ಮತ್ತು ಪ್ರಾಯೋಗಿಕ ನೆಲೆಯಲ್ಲಿ ಅಳವಡಿಸಬೇಕಾದ ಒತ್ತಡವೂ ಈ ಕ್ಷೇತ್ರದ ಮೇಲೆ ಬಿದ್ದಿದೆ. ಆದ್ದರಿಂದ ಎಂಜಿನಿಯರಿಂಗ್ ಶಿಕ್ಷಣದ ಅವಧಿಯಲ್ಲಿ ವಿದ್ಯಾರ್ಥಿ ಎಲ್ಲ ಅಂಶಗಳಲ್ಲಿ ಪರಿಣಿತನಾಗಿ ಕಾಲೇಜಿನಿಂದ ಹೊರಬರುತ್ತಲೇ ಉದ್ಯಮ ರಂಗಕ್ಕೆ ಹೊಂದಿಕೊಳ್ಳುವ ತರಬೇತಿಯನ್ನು ಪಡೆದಿರುವಂತೆ ಪಠ್ಯಕ್ರಮದ ಸಂಯೋಜನೆ ಮತ್ತು ಪರೀಕ್ಷೆಗಳ ವಿನ್ಯಾಸ. ಸೆಮಿಸ್ಟರ್ ಪದ್ಧತಿಯ ಶಿಕ್ಷಣ, ಬಿಡುವಿಲ್ಲದಂತೆ ಬೋಧನೆ, ಪ್ರಯೋಗ, ಸಣ್ಣ ಪರೀಕ್ಷೆ, ಸ್ವಂತ ಯೋಜನೆಗಳನ್ನು ಕೈಗೊಳ್ಳುವ ಶೈಕ್ಷಣಿಕ ಒತ್ತಡ– ಇವೆಲ್ಲ ಎಂಜಿನಿಯರಿಂಗ್ ಶಿಕ್ಷಣದ ಅನಿವಾರ್ಯತೆಗಳು.

ಹದಿಹರೆಯದ ಹೊಸ್ತಿಲನ್ನು ದಾಟುವ ಅವಸ್ಥೆಯಲ್ಲಿರುವ ಯುವಜನರಿಗೆ ಎಂಜಿನಿಯರಿಂಗ್ ಶಿಕ್ಷಣ ಹೇರುವ ಮಾನಸಿಕ ಒತ್ತಡ ಸುಲಭವಾಗಿ ಎದುರಿಸುವಂಥದ್ದಲ್ಲ. ಅದರಲ್ಲಿಯೂ ಮನೆಯ ಸಂರಕ್ಷಿತ ವಲಯದಿಂದ ಹೊರಗಿನ ನಿರ್ಬಂಧಿತ ಪರಿಸರಕ್ಕೆ ಅಧ್ಯಯನ ನಿಮಿತ್ತವಾಗಿ ಬರುವ ಹುಡುಗ– ಹುಡುಗಿಯರು ವೈಯಕ್ತಿಕ ನೆಲೆಯಲ್ಲಿಯೂ, ಶೈಕ್ಷಣಿಕ ನೆಲೆಯಲ್ಲಿಯೂ ಆರಂಭದ ಕೆಲವು ತಿಂಗಳು ಹೋರಾಟವನ್ನೇ ನಡೆಸಬೇಕಾಗುತ್ತದೆ. ವಯಸ್ಸು, ಸ್ವಾತಂತ್ರ್ಯ, ಅವಕಾಶಗಳನ್ನು ತಮ್ಮ ವ್ಯಕ್ತಿತ್ವದ ಬೆಳವಣಿಗೆಗೆ ಬಳಸಿಕೊಳ್ಳುವಂಥ ವಿವೇಕವನ್ನು ಉಳಿಸಿಕೊಳ್ಳಬೇಕಾಗುತ್ತದೆ. ಸ್ವಲ್ಪಮಟ್ಟಿಗೆ ಎಚ್ಚರ ತಪ್ಪಿದರೂ ಪರಿಣಾಮ ಗಂಭೀರವಾಗುತ್ತದೆ. ಮಾನಸಿಕ ಸ್ಥಿಮಿತವನ್ನು ಸಡಿಲಗೊಳಿಸಿದರೆ ಶೈಕ್ಷಣಿಕ ಒತ್ತಡವನ್ನು ಎದುರಿಸುವುದು ಕಷ್ಟವಾಗುತ್ತದೆ. ಹೆತ್ತವರ ನಿರೀಕ್ಷೆ, ಸ್ವಂತದ್ದಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಗುರಿ– ಆದರ್ಶಗಳನ್ನು ತಲೆಯಲ್ಲಿ ತುಂಬಿಕೊಂಡವರು, ಹೊರಗಿನ ಆಕರ್ಷಣೆಗಳು ತಮ್ಮ ಗುರಿಯನ್ನೇ ನಾಶಪಡಿಸಲು ಬಿಡಲಾರರು. ಹೆತ್ತವರನ್ನೂ ಇಷ್ಟಮಿತ್ರರನ್ನೂ ಮಾನಸಿಕವಾಗಿ ಕೂಗಳತೆಯಷ್ಟು ಸನಿಹದಲ್ಲಿ ಇರಿಸಿಕೊಳ್ಳುವಷ್ಟು ಈಗಿನ ಸಂವಹನ ಸಲಕರಣೆಗಳು ಪ್ರಭಾವಶಾಲಿಯಾಗಿವೆ. ಆದ್ದರಿಂದ ತಾಂತ್ರಿಕ ಶಿಕ್ಷಣದ ನೆಪದಲ್ಲಿ ಮನೆಯ ಆಪ್ತ ಪರಿಸರದಿಂದ ಹೊರಗೆ ಬರುವ ಯುವಕ ಯುವತಿಯರು ಮಾನಸಿಕ ಒತ್ತಡದಿಂದ ಬಳಲುವುದಕ್ಕೆ ಕಾರಣವಿಲ್ಲ. ಶೈಕ್ಷಣಿಕ ಒತ್ತಡ ಅನಿರೀಕ್ಷಿತವಲ್ಲ. ಸಾಮರ್ಥ್ಯ ಇದ್ದರೆ ಮಾತ್ರವೇ ಇಂಜಿನಿಯರಿಂಗ್ ಶಿಕ್ಷಣಕ್ಕೆ ಪ್ರವೇಶ ಸಿಗುವುದರಿಂದ ಅವರು ಶೈಕ್ಷಣಿಕ ಒತ್ತಡವನ್ನು ನಿರ್ವಹಿಸಲಾರರೆಂಬುದು ನೆಪವಾಗಲಾರದು.

ಈಚೆಗೆ ಬೆಂಗಳೂರಿನ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಯೊಬ್ಬ ಶೈಕ್ಷಣಿಕ ಒತ್ತಡ ಎದುರಿಸಲಾಗದೆ ನೇಣಿಗೆ ಕೊರಳೊಡ್ಡಿದ ದುರ್ಘಟನೆ ವಿಷಾದಕರ.  ತಾಂತ್ರಿಕ ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟಕ್ಕೆ ಸಂಬಂಧಿಸಿದ ನಿಯಮಗಳು ಸ್ವಾಯತ್ತ ಕಾಲೇಜುಗಳ ವಿಷಯದಲ್ಲಿ ಕಠಿಣವಾಗಿರುವುದು ವಿದ್ಯಾರ್ಥಿಗಳ ಮೇಲಿನ ಒತ್ತಡವನ್ನು ಹೆಚ್ಚಿಸಿದೆ ಎಂಬಂತಹ ಕಾರಣಗಳನ್ನು ಇಂಥ ದುರ್ಘಟನೆಗಳ ಸಂದರ್ಭದಲ್ಲಿ ಹೇಳಲಾಗುತ್ತದೆ. ಇವೆಲ್ಲ ದುರಂತವೊಂದರ ಹೊಣೆಗಾರಿಕೆಯನ್ನು ಜಾರಿಸಿಕೊಳ್ಳುವ ವಾದ ವಿವಾದಗಳಷ್ಟೆ. ಪ್ರತಿ ವಿದ್ಯಾರ್ಥಿಯೂ ಸಮರ್ಥನೆಂದೇ ಅವರಿಗೆ ಅಧ್ಯಯನ ಅವಕಾಶಗಳು ಪ್ರಾಪ್ತವಾಗುತ್ತವೆ. ಅವರ ಕಲಿಕೆಯ ಸಾಮರ್ಥ್ಯ ಕುಸಿಯದಂತೆ ನೋಡಿಕೊಳ್ಳುವ ಹೊಣೆ ಶಿಕ್ಷಣ ಸಂಸ್ಥೆಗಳದ್ದು. ನಿಯಮಗಳನ್ನು ದೂರುವುದು ಹೊಣೆಯಿಂದ ತಪ್ಪಿಸಿಕೊಳ್ಳುವ ತಂತ್ರ. ಇಂತಹ ತಂತ್ರಗಳಿಂದ ತಾಂತ್ರಿಕ ಕಾಲೇಜುಗಳ ವರ್ಚಸ್ಸು ಹೆಚ್ಚುವುದಿಲ್ಲ.

■ ಲಕ್ಷ್ಮಣ ಕೊಡಸೆ